
ಮಧ್ಯಪ್ರದೇಶದ ಕಲೆ



ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು

ಮದ್ಯ ಪ್ರದೇಶದ ಕಲೆ

ಪ್ರಧಾನ ಸಂಪಾದಕರು

ಪಿ.ಆರ್. ತಿಪ್ಪೇಸ್ವಾಮಿ

ಲೇಖಕ

ಕೆ.ವಿ.ಸುಬ್ರಹ್ಮಣ್ಯಂ

ಕರ್ನಾಟಕ ಲಲಿತಕಲಾ ಅಕಾಡೆಮಿ

ನೃಪತುಂಗ ರಸ್ತೆ ಬೆಂಗಳೂರು

MADHYA PRADESHADHA KALE : A Study of Madhya Pradesh Art by K.V.Subramanyam, for the Karnataka Lalithakala Academy. Nrupatunga Road, Bangalore - 560 002

Published By : K.Mukundan, Registrar,
Lalithakala Academy.

First Impression : 1995.

Copies : 1000

Price : Rs. 10-00

ಪ್ರಧಾನ ಸಂಪಾದಕರು : ಪಿ.ಆರ್.ತಿಪ್ಪೇಸ್ವಾಮಿ.

ಪ್ರಕಟಣಾ ಸಮಿತಿ : ವಿ.ಟಿ.ಕಾಳೆ
ಎಸ್.ಧನಲಕ್ಷ್ಮಿ
ಡಾ: ಬಿ.ಕೆ.ಹಿರೇಮಠ
ರಘುಪತಿ ಭಟ್
ವೈ.ಎಚ್.ಸೂಗೂರ್.

ಮುಖಚಿತ್ರ : ಎನ್. ಎಸ್.ಬೇಂದ್ರೆ
ಅವರ ಕಲಾಕೃತಿ.

Printed by : Lavanya Mudrana
19, Vidyapeeta Circle,
Banashankari 1st stage
Bangalore - 560 050.

ಪ್ರಧಾನ ಸಂಪಾದಕರ ನುಡಿ

ಬೇರೆ ರಾಜ್ಯದ ಕಲೆಯನ್ನು ಪರಿಚಯಿಸುವ ಉದ್ದೇಶ ಅಕಾಡೆಮಿಯದು. ಪ್ರವಾಸ ಮಾಲೆಯಲ್ಲಿ ಈಗಾಗಲೇ ತಮಿಳು ನಾಡು ಹಾಗೂ ಕೇರಳ ಕುರಿತು ಎರಡು ಪುಸ್ತಕಗಳು ಪ್ರಕಟವಾಗಿವೆ. ಕೆ.ವಿ. ಸುಬ್ರಹ್ಮಣ್ಯಂರ ಮಧ್ಯಪ್ರದೇಶದ ಕಲೆ ಈ ಮಾಲೆಯ ಮೂರನೇ ಕೃತಿ.

ಮಧ್ಯಪ್ರದೇಶ ಕಲೆಗೆ ತನ್ನದೇ ಆದ ಪ್ರೋತ್ಸಾಹವನ್ನು ನೀಡಿಕೊಂಡು ಬಂದ ರಾಜ್ಯದ ಕಲೆಯನ್ನು ಸಂಕ್ಷಿಪ್ತವಾಗಿ ಪರಿಚಯವನ್ನು ಈ ಕಿರು ಕೃತಿಯಲ್ಲಿ ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ಇವರು ಹೋಶಂಗಾಬಾದ್ ಜಿಲ್ಲೆಯಲ್ಲಿನ ಗುಹೆಗಳು, ಇಂಡೋರ್, ಅಹಮದಾಬಾದ್, ರಸ್ತೆಯಲ್ಲಿನ ಬಾಗ್‌ಗಳಲ್ಲಿನ ಭಿತ್ತಿಚಿತ್ರಗಳು, ಸಿಧಿ ಜಿಲ್ಲೆಯ ಮಾರಾಗುಹೆಗಳು, ರಾಯಗಡ ಜಿಲ್ಲೆಯ ಸಿಂಘಾನ್‌ಪುರ ಗುಹೆಗಳಲ್ಲಿನ. ಶಿಲ್ಪಗಳು ಹಾಳಾಗುತ್ತಿರುವ ಬಗ್ಗೆ ಉಲ್ಲೇಖವಿದೆ.

ಅಲ್ಲಿನ ಆದಿವಾಸಿ ಸಂಗ್ರಹಗಳ ಕಲೆಯ ಬಗ್ಗೆ, ವಿಶಿಷ್ಟವಾಗಿ ಹಚ್ಚೆಯ ಬಗ್ಗೆ ತಿಳಿಸುತ್ತಾರೆ.

ಉದಯಗಿರಿ ಗುಹೆಗಳು, ಖಜರಾಹೋ ದೇವಾಲಯಗಳು, ಟಿಕಾಮಗರ್ ಜಿಲ್ಲೆಯ ಓರ್ಛಾದ ಅರಮನೆಗಳು, ದೇವಾಲಯಗಳು ಭೂಪಾಲ್‌ನ ಭಾರತ್ ಭವನ ಬಗ್ಗೆ ಅಲ್ಲಿನ ಕಲೆಯ ಬಗ್ಗೆ ಸೂಕ್ಷ್ಮವಾಗಿ ವಿವರಿಸಿದ್ದಾರೆ. ಪ್ರತಿಭಾವಂತ, ಪದ್ಮಶ್ರೀ ವಿಜೇತ ಕಲಾವಿದ ಎನ್.ಎಸ್.ಬೇಂದ್ರೆ ಬಗ್ಗೆಯೂ, ಅರಮನೆಯ ಆಸ್ಥಾನ ಶಿಲ್ಪಿಗಳಾದ ರುಬಿನಾ ಅಲೆ (ಇವರ ಪುತ್ರ ಕರ್ನಾಟಕದಲ್ಲಿ ನೆಲಸಿರುವ ಬಾವುನಿ) ಮೊದಲಾದ ಚಿತ್ರ - ಶಿಲ್ಪಿಗಳನ್ನು ಇಲ್ಲಿದಾಖಲಿಸಲಾಗಿದೆ.

ಕಷ್ಟಸಾಧ್ಯವಾದ ಪ್ರವಾಸದ ಮೂಲಕ ಮಧ್ಯಪ್ರದೇಶದ ಕಲೆಯನ್ನು ಈ ಕಿರು ಕೃತಿಯ ಮೂಲಕ ವಿವರಿಸಿರುವ ಕೆ.ವಿ.ಸುಬ್ರಹ್ಮಣ್ಯಂ ಅವರಿಗೆ ಅಭಾರಿಯಾಗಿದ್ದೇನೆ.

ಈ ಕೃತಿಯನ್ನು ಸುಂದರವಾಗಿ ಮುದ್ರಿಸಿದ ಲಾವಣ್ಯ ಮುದ್ರಣದವರಿಗೆ ವಂದನೆಗಳು.

ಪಿ.ಆರ್.ತಿಪ್ಪೇಸ್ವಾಮಿ
ಪ್ರಧಾನ ಸಂಪಾದಕರು

ಮೊದಲ ನುಡಿ ....

ಸೀಮಿತ ಕಾಲಾವಕಾಶದಲ್ಲಿ ಮಧ್ಯಪ್ರದೇಶದಂಥ ವಿಶಿಷ್ಟ, ವಿಶಾಲ, ವೈವಿಧ್ಯಮಯ ರಾಜ್ಯದ ಕಲೆಯನ್ನು ಸಂಪೂರ್ಣವಾಗಿ ನೋಡುವುದಾಗಲಿ, ದಾಖಲಿಸುವುದಾಗಲಿ ಸಾಧ್ಯವಿಲ್ಲವೆಂದು ನನಗೆ ಮನವರಿಕೆಯಾಗಿದೆ. ಆದರೂ ಹಲವು ಬಾರಿ ಆ ರಾಜ್ಯಕ್ಕೆ ಪ್ರವಾಸಮಾಡಿ ಅಲ್ಲಿನ ಕಲೆಯ ಒಳಹೊರಗುಗಳನ್ನು ಅನುಭವಿಸುವ ಪ್ರಯತ್ನಮಾಡಿದ್ದೇನೆ. ಕರ್ನಾಟಕ ಲಲಿತ ಕಲಾ ಅಕಾಡೆಮಿ 1992-93ನೇ ಸಾಲಿನಲ್ಲಿ ನನಗೆ ಪ್ರವಾಸಾನುದಾನ ನೀಡಿ ಆ ರಾಜ್ಯಕ್ಕೆ ಕಳುಹಿಸಿದಾಗ ಅಲ್ಲಿ ಹೆಚ್ಚಿನ ಅಧ್ಯಯನ ಮಾಡುವುದು ಸಾಧ್ಯವಾಯಿತು. ಈ ಕಾರ್ಯದಲ್ಲಿ ನನಗೆ ನೆರವಾದ ಭೂಪಾಲದ ಭಾರತ ಭವನ, ಮಧ್ಯಪ್ರದೇಶ ಕಲಾ ಪರಿಷತ್, ಭೂಪಾಲ್ ವಸ್ತುಸಂಗ್ರಹಾಲಯದ ನಿರ್ವಾಹಕರು, ಖಜರಾಹೋದ ASI ಮ್ಯೂಸಿಯಂ ನಿರ್ವಾಹಕರು, ಜಗದಲ ಪುರದ Anthropology Servey of India ಮ್ಯೂಸಿಯಂನ ವ್ಯವಸ್ಥಾಪಕರು, ಕೊಂಡಗಾವ್‌ನ ಬಸ್ತಾರ್ ಪಾರಂಪರಿಕ ಶಿಲ್ಪಿ ಪರಿವಾರ್ ಸಂಸ್ಥೆಯ ನಿರ್ವಾಹಕರು, ನಾರಾಯಣಪುರದ ಆದಿವಾಸಿ ಕಲಾವಿದ ಸುಖರಾಮ್ ಹುಸೆಂಡಿ, ಭೂಪಾಲದ ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯದ ನಿರ್ವಾಹಕರು, ಮೊದಲಾದವರಿಗೆ ಋಣಿಯಾಗಿದ್ದೇನೆ. ಬಸ್ತಾರಿನ ಕಿಲೇವಾಲ್ ಬಳಿಯ ಅರಣ್ಯದ ನಡುವೆ ಹಲ್ಲೆಕೋರರಿಂದ ನನ್ನನ್ನು ರಕ್ಷಿಸಿ ಬಸ್ ನಿಲ್ಲಿಸಿ, ಹತ್ತಿಸಿ ಕಳುಹಿಸಿದ ಅಲ್ಲಿನ ಮನುಷ್ಯರಿಗೆ ಕೃತಜ್ಞನಾಗಿದ್ದೇನೆ. ಈ ಮುಖ್ಯ ಪ್ರವಾಸಕ್ಕೆ ಕಾರಣರಾದ ಅಕಾಡೆಮಿಯ ಅಧ್ಯಕ್ಷರಾದ ಪಿ.ಆರ್.ತಿಪ್ಪೇಸ್ವಾಮಿ ಹಾಗೂ ರಿಜಿಸ್ಟ್ರಾರ್ ಮತ್ತು ಅಕಾಡೆಮಿ ಕಾರ್ಯಾಲಯದ ಸಿಬ್ಬಂದಿ ವರ್ಗಕ್ಕೆ ಆಭಾರಿಯಾಗಿದ್ದೇನೆ.

- ಕೆ.ವಿ.ಸುಬ್ರಹ್ಮಣ್ಯಂ

ಮದ್ಯಪ್ರದೇಶದ ಕಲೆ

ಇತಿಹಾಸಪೂರ್ವಕಾಲ, ಇತಿಹಾಸಕಾಲ, ಮತ್ತು ಮಧ್ಯಯುಗವೇ ಅಲ್ಲದೆ ಸಮಕಾಲೀನ ಕಲೆಯ ಅತ್ಯುತ್ತಮ ಉದಾಹರಣೆಗಳಂಥ ಕಲಾ ಸೃಷ್ಟಿಸಂಕುಲವನ್ನು ಮಧ್ಯಪ್ರದೇಶ ಹೊಂದಿದೆ. ಸುಮಾರು ೧೮೦೦ಕ್ಕೂ ಹೆಚ್ಚು ಸ್ಮಾರಕಗಳು ಈ ರಾಜ್ಯದಲ್ಲಿವೆ. ನಮ್ಮ ದೇಶದ ಪ್ರಪ್ರಥಮ ಮಾನವ ಸೃಷ್ಟಿಯ ಶಿಲ್ಪವೂ ದುರ್ಗ್ ಜಿಲ್ಲೆಯ ಬಲೋಡ್ ತಾಲ್ಲೂಕಿನ ಕೇಂದ್ರಕ್ಕೆ ಹತ್ತಿರದಲ್ಲಿರುವ ಕಾರ್ ಖಾಬಾತ್ ಹಳ್ಳಿಯಲ್ಲಿದೆ ಎಂಬುದೂ ಗಮನಾರ್ಹ. ಅತ್ಯಂತ Primitive ಆದ ಜನರು ಈಗಲೂ ಈ ರಾಜ್ಯದಲ್ಲಿದ್ದಾರೆ. ಮಧ್ಯಪ್ರದೇಶ ಭಾರತಭೂಪಟದಲ್ಲಿ ಕೇಂದ್ರಸ್ಥಾನವನ್ನು ಹೊಂದಿರುವಂತೆಯೇ ಭಾರತೀಯ ಕಲಾಇತಿಹಾಸವನ್ನೇ ಕೇಂದ್ರ ಸ್ಥಾನದಲ್ಲು ಹೊಂದಿದೆ.

ಹರಪ್ಪಾ ಮಹೆಂಜೋದಾರೋ ನಾಗರೀಕತೆಯಿಂದ ಆರಂಭಗೊಳ್ಳುತ್ತಿದ್ದ ನಮ್ಮ ಕಲಾ ಇತಿಹಾಸ ಮಧ್ಯಪ್ರದೇಶದ ನೂರಾರು ಇತಿಹಾಸ ಪೂರ್ವ ಗುಹಾಚಿತ್ರ ನಿವೇಶನಗಳ ಶೋಧನೆಯ ನಂತರ(ಸುಮಾರು ೧೮೮೦ರ ನಂತರ) ಆ ಪುಟವನ್ನು ಬದಲಿಸಿದೆ. ನಮ್ಮ ದೇಶದ ೨೦೦ಕ್ಕೂ ಹೆಚ್ಚು rock art siteಗಳಲ್ಲಿ ೨೦೦೦ಕ್ಕೂ ಹೆಚ್ಚು ಶಿಲಾಶ್ರಯಗಳು (rock art shelters) ಇವೆ. ಅವುಗಳಲ್ಲಿ ಸಾವಿರಾರು ಚಿತ್ರಗಳಿವೆ. ಹೆಚ್ಚಿನ ಶಿಲಾಶ್ರಯಗಳು ಮಧ್ಯಭಾರತದಲ್ಲಿರುವ ಮಧ್ಯಪ್ರದೇಶದ ಮರಳುಗಲ್ಲಿನ ವಿಂಧ್ಯಾಚಲ ಶ್ರೇಣಿಯ ನರ್ಮದಾ ಬೆಟ್ಟಾನದಿಗಳ ಕಣಿವೆಗಳಲ್ಲಿವೆ. ತಮ್ಮ ಬದುಕಿಗೆ, ಈ ನಿವೇಶನಗಳನ್ನು ಆರಿಸಿಕಂಡ ಇತಿಹಾಸ ಪೂರ್ವ ಜನಾಂಗ ಇಲ್ಲೆಲ್ಲಾತಮ್ಮ ಚಿತ್ರಸಂಪ್ರದಾಯವನ್ನು ಅದ್ಭುತವಾಗಿ ಬಿಟ್ಟು ಹೋಗಿದ್ದಾರೆ. ಒಬೇದುಲ್ಲಾಗಂಜ್ ಬಳಿಯ ಭೀಮ್ ಬೇಟ್ಕಾ ಹೆಚ್ಚು ಪರಿಚಿತವಾಗಿದ್ದರೂ ಅದರಷ್ಟೇ ಮುಖ್ಯವಾದ ಶಿಲಾಶ್ರಯ ಚಿತ್ರಕಲಾ ಸಂಕುಲಗಳೂ ಇವೆ. ವಿಷ್ಣು ಎಸ್. ವಾಕಾನ್ಕರ್ ಮತ್ತಿತರರ ಕೊಡುಗೆ ಈ ದೃಷ್ಟಿಯಿಂದ ಉಲ್ಲೇಖಾರ್ಹ. ಇತ್ತೀಚೆಗೆ ಭೂಪಾಲದ ಪೂಣೀಮಾ ಮಸಿ ಹೋಶಂಗಾಬಾದಿನ ಶಿಲಾಶ್ರಯಗಳ - ಚಿತ್ರಗಳ ಕುರಿತ ಆಳವಾದ ಅಧ್ಯಯನ ನಡೆಸಿದ್ದಾರೆ. ಹೋಶಂಗಾಬಾದ್ ಜಿಲ್ಲೆಯಲ್ಲೇ ೨೦೦ಕ್ಕೂ ಹೆಚ್ಚು ಶಿಲಾಶ್ರಯಗಳು ಇವೆ.

ಪುರಾತನ ಶಿಲಾಯುಗ, ಹೊಸ ಶಿಲಾಯುಗಗಳಿಂದ ಇತಿಹಾಸದ ಆರಂಭ ಕಾಲದವರೆಗೆ ಹಾಗೂ ಮಧ್ಯ ಕಾಲೀನ ಇತಿಹಾಸದ ಕಾಲದಲ್ಲೂ ಸೃಷ್ಟಿಯಾದ



ಭೀಂಬೇಟ್ಕಾ ಶಿಲಾಶ್ರಯ ಚಿತ್ರ.

ಚಿತ್ರಕಲೆಯನ್ನು ಇಂದಿಗೂ ನೋಡಬಹುದಾಗಿದೆ. ಹೋಶಂಗಾಬಾದ್ ಬಳಿಯ ಆದಂಗಡ, ಪ್ರಖ್ಯಾತ ಪಚ್ ಮಡಿ ಗಿರಿಧಾಮದ ಬಳಿಯ ಮಹದೇವ ಗುಹೆಗಳಲ್ಲಿ ಭಿಂಬೇಟ್ಕಾದಷ್ಟೇ ಮಹತ್ವದ ಸುಂದರವಾದ ಚಿತ್ರಗಳನ್ನು ನೋಡಬಹುದಾಗಿದೆ. ಅಂದಿನ ದಿನನಿತ್ಯದ ಚಟುವಟಿಕೆಗಳು ಸಾಂಸ್ಕೃತಿಕ ಆಚರಣೆಗಳು, ಬೇಟೆ, ಮನುಷ್ಯರ, ಪ್ರಾಣಿಗಳ, ಪಕ್ಷಿಗಳ ಚಿತ್ರಗಳನ್ನು ಕೆಂಪು ಕಾವಿ ಹಾಗೂ ಬಿಳಿಯ ಬಣ್ಣಗಳಲ್ಲಿ ಕಾಣಬಹುದಾಗಿದೆ. ಅಪರೂಪಕ್ಕೆ ಹಸಿರು ಹಳದಿಗಳನ್ನು ಭೀಂಬೆಟ್ಕಾದಲ್ಲಿ ಗುರುತಿಸಬಹುದಾಗಿದೆ.

ಮಹಾಭಾರತ ಮತ್ತು ಬೌದ್ಧ ಧರ್ಮದ ಸಾಹಿತ್ಯಗಳಲ್ಲಿ ಹಲವು ಬಾರಿ ಮಧ್ಯಪ್ರದೇಶದ ಭೂ ಭಾಗಗಳ ಪ್ರಸ್ತಾಪವಿದೆ. ಪುರಾತನ ಭೂಮಿಗಳಲ್ಲೊಂದಾದ ಈ ಪ್ರದೇಶ ವತ್ಸರ ರಾಜ್ಯವಾಗಿದ್ದು ಅವಂತಿ ಮತ್ತು ಉಜ್ಜಯಿನಿಗಳನ್ನು ತನ್ನ ರಾಜಧಾನಿಗಳನ್ನಾಗಿ ಹೊಂದಿತ್ತು. ಚಂದ್ರಗುಪ್ತಮೌರ್ಯನು ತನ್ನ ಚಕ್ರಾದಿಪತ್ಯವನ್ನು ಹಿಮಾಲಯದಿಂದ ನರ್ಮದಾ ಕಣಿವೆಯವರೆಗೆ ವಿಸ್ತರಿಸಿದನು. ಅವಂತಿಯು ಮೌರ್ಯರ ಕಾಲದಲ್ಲಿ ಮುಖ್ಯ ಜನಪದವಾಗಿ ಮುಂದುವರೆಯಿತು. ಪಶ್ಚಿಮ ಭಾರತ ವಿಭಾಗದ ಆಡಳಿತ ನಿರ್ವಾಹಕನಾಗಿ ಉಜ್ಜಯಿನಿಗೆ ಅಶೋಕನು ನಿಯೋಜಿಸಲ್ಪಟ್ಟ ಸಂದರ್ಭ. ಅವನು ಸಾಂಚಿಯ ಹಲವು ಸ್ತೂಪಗಳಿಗೆ ಅಸ್ತಿಭಾರವನ್ನು ಹಾಕಿದನು, ಕ್ರಿಸ್ತಪೂರ್ವ ೨ನೇಯ ಶತಮಾನದಲ್ಲಿ ಮಧ್ಯಪ್ರದೇಶದಲ್ಲಿ ಶಕರ, ಕ್ಷತ್ರಪ ರಾಜಕುಮಾರರ ಆಳ್ವಿಕೆಯ ಪರಂಪರೆ ಆರಂಭ. ೨ನೆಯ ಚಂದ್ರಗುಪ್ತ (ವಿಕ್ರಮಾದಿತ್ಯ) ಶಕರನ್ನು ಸೋಲಿಸಿ ವಿಕ್ರಮ ಸಂವತ್ಸರವನ್ನು (ಕ್ರಿಸ್ತಶಕಾರಂಭಕ್ಕೆ ೫೭ ವರ್ಷಗಳ ಮೊದಲು) ಆರಂಭಿಸಿದನು. ಪ್ರಸ್ತುತ ಧರ್ ಜಿಲ್ಲೆಯಲ್ಲಿರುವ ಬಾಗ್ ಗುಹೆಗಳ ಚಿತ್ರಗಳು ಈ ಕಾಲದಲ್ಲಿ ಚಿತ್ರಿಸಿರುವವೇ ಆಗಿವೆ. ಇಂದೋರ್ ಅಹಮದಾಬಾದ್ ರಸ್ತೆಯಲ್ಲಿರುವ ಬಾಗ್, ವಿಂದ್ಯಪರ್ವತಗಳ

ತಪ್ಪಲಿನ ಗುಡ್ಡಗಳಲ್ಲಿದೆ; ಬಾಗ್ ಮತಿ ನದಿಯೂ ಹರಿಯುತ್ತಿದೆ. ವಿನಾಶದ ಅಂಚಿನಲ್ಲಿರುವ ಚಿತ್ರಗಳನ್ನು ಉಳಿಸಕೊಳ್ಳಲಾಗಿಲ್ಲ. ಆದರೂ ಬಾದಾಮಿಯ ಭಿತ್ತಿಚಿತ್ರಗಳಿಗಿಂತಲೂ ಇವು ಉತ್ತಮ ಸ್ಥಿತಿಯಲ್ಲಿರುವುದು ಸಮಾಧಾನ ತರುತ್ತದೆ. ವಿಶಿಷ್ಟವಿನ್ಯಾಸದ ಬೃಹತ್ ಕಂಬಗಳು ತುಂಡು ತುಂಡಾಗಿ ಬಿದ್ದಿವೆ. ಶಿಲ್ಪಗಳು ಹಲವು ರೀತಿಗಳಲ್ಲಿ ನಾಶವಾಗುತ್ತಿವೆ. ಪ್ರಸ್ತುತ ಅಲ್ಲಿನ ಕಲೆಯನ್ನು ಉಳಿಸುವ ಪ್ರಯತ್ನ ನಡೆದಿದೆ. (ಈ ಗುಹೆಗಳ ಜೊತೆಗೆ ಸಿಧಿ ಜಿಲ್ಲೆಯ ಮಾರಾಗುಹೆಗಳೂ, ರಾಯಗರ್ ಜಿಲ್ಲೆಯ ಸಿಂಘಾನ್ ಪುರ ಗುಹೆಗಳೂ ಈ ರಾಜ್ಯದಲ್ಲಿವೆ).

ಸುಮಾರು ಕ್ರಿ.ಶ.೮೮೫ರ ನಂತರದ ಹಲವು ರಾಜಕೀಯ ಬೆಳವಣಿಗೆಗಳನಂತರ ೧೩ನೆಯ ಶತಮಾನದಲ್ಲಿ ಮಹಮದ್ದೀಯರ ಆಕ್ರಮಣದವರೆಗೂ ಈ ಪ್ರದೇಶ ಮಾಳ್ವಾದ ಪಾರಮಾರರು, ಗ್ವಾಲಿಯಾರ್‌ನ ಪರಿಹಾರರು, ಖಿಂದೇಲ್ ಖಂಡದ ಸಾಂದೇಲರು ರೇವಾದ ಕಲಚೂರ್ಯರ ನಡುವೆ. ಹೋರಾಟ, ಹೊಂದಾಣಿಕೆ ಮರುಹೊಂದಾಣಿಕೆಗಳು ಕೂಡಿ ಬರುತ್ತಿದ್ದುವು. ಮಧ್ಯಪ್ರದೇಶದ ಪೂರ್ವಭಾಗದಲ್ಲಿ ಚಾಂದೇಲರು ವಿಶಿಷ್ಟವಸ್ತುಶಿಲ್ಪಕ್ಕೆ, ಶಿಲ್ಪಕಲೆಗೆ ತಮ್ಮನ್ನು ತೊಡಗಿಸಿಕೊಂಡರು. ಆನಂತರ ಹಲವು ಅರಸು ಮನೆತನಗಳು ಆಳಿದವಾದರೂ ಅವರುಗಳು ಅಂತಿಮವಾಗಿ ಬ್ರಿಟೀಷರಿಗೆ ತಲೆತಗ್ಗಿಸಬೇಕಾಗಿ ಬಂದದ್ದು ಇತಿಹಾಸ.

ಮಧ್ಯಪ್ರದೇಶದಲ್ಲೆಲ್ಲಾ ಹಲವು ಆದಿವಾಸಿ ಪಂಗಡಗಳು ಇಂದಿಗೂ ಇವೆ. ಅವುಗಳಲ್ಲಿ ಬಸ್ತಾರ್ ಜಿಲ್ಲೆಯ ಬಸ್ತಾರ್, ಜಗದಲಪುರ, ಕೊಂಡಗಾವ್, ನಾರಾಯಣಪುರ, ಚಿತ್ರಕೂಟ ಮೊದಲಾದೆಡೆಗಳಲ್ಲಿ ಹಾಗೂ ರಾಯಗರ್ ಜಿಲ್ಲೆಯ ಸನ್ನಾಊರಿನ ಸುತ್ತ ಮುತ್ತ ವಾಸಿಸುತ್ತಿರುವ ಆದಿವಾಸಿಗಳು, ಚಿಂದ್ವಾರ ವಿಭಾಗದ ಆದಿವಾಸಿಗಳು, ಮುಖ್ಯರಾದವರು. ಆದಿವಾಸಿ ಚಿತ್ರ, ಶಿಲ್ಪ, ನೃತ್ಯ ವಾಸ್ತುಗಳೆಲ್ಲಾ ಇಲ್ಲಿ ವಿಶಿಷ್ಟವಾಗಿ ಉಳಿದು ಬಂದಿವೆ. ರಾಯಗಡ ಜಿಲ್ಲೆಯ ಜಶ್‌ಪುರದ ಸುತ್ತಮುತ್ತಲಿನ ಗುಡ್ಡಗಾಡುಗಳು



ಸಾಂಚಿಯ ಸ್ತೂಪ.



ಬಸ್ತಾರ್ ಭಿತ್ತಿಚಿತ್ರ.

ಜನರ ಮಾಂತ್ರಿಕ ಬರಹ, ನಿಗೂಢ ಸಾಂಕೇತಿಕ ಆಕೃತಿ-ವಿಕೃತಗಳ ಚಿತ್ರಕಲೆ ಇಲ್ಲಿ ಉಲ್ಲೇಖಾರ್ಹ. ಜಗದಲಪುರ-ಕೊಂಡಗಾವ್‌ಗಳಲ್ಲಿ ಆ ಸುತ್ತಲಿನ ಆದಿವಾಸಿ ಜನರ ಚಿತ್ರಶಿಲ್ಪ, ಕರಕುಶಲ ಕಲೆಗಳನ್ನು ಸಂರಕ್ಷಿಸುವ ಬೆಳೆಸಿ ಪ್ರೋತ್ಸಾಹಿಸುವ ಗಮನಾರ್ಹ ಕೆಲಸಗಳಾಗುತ್ತಿವೆ. ಈ ಉದ್ದೇಶಕ್ಕಾಗಿ ಹಲವು ಕೇಂದ್ರಗಳಿವೆ. ಆ ಕಲೆಯ ವಸ್ತು ಸಂಗ್ರಹಾಲಯಗಳೂ ಇವೆ. ಜಗದಲಪುರದ Anthropology servey of Indiaದ ವಸ್ತುಸಂಗ್ರಹಾಲಯದಲ್ಲಿ ಮಾರಿಯಾ, ಮುರಿಯಾ, ಒರಾಬನ್, ದುರುವಾ, ಬೈಗಾ, ಗೊಂಡ್, ಭಿಲ್, ಸಿಂಗ್ ಮಾರಿಯಾ ಮೊದಲಾದ ಆದಿವಾಸಿ ಪಂಗಡಗಳ ಸಂಸ್ಕೃತಿಯನ್ನು ಪ್ರದರ್ಶಿಸಲಾಗಿದೆ. ಅವರ ಬದುಕು, ಶಿಲ್ಪಕಲೆಯನ್ನು ವಿಶಿಷ್ಟವಾಗಿ ಪ್ರದರ್ಶಿಸಲಾಗಿದೆ. ಮುರಿಯಾ ಜನರ ಘೋಟುಲದ ಮರದ ಬಾಗಿಲ ಉಬ್ಬು ಶಿಲ್ಪಗಳೂ ಇಲ್ಲಿವೆ.

ಕೊಂಡಗಾವ್‌ನ ಬಸ್ತಾರ್ ಶಿಲ್ಪಿ ಪರಿವಾರ್

ಕೊಂಡಗಾವ್‌ನ ಪಾರಂಪರಿಕ ಬಸ್ತಾರ್ ಶಿಲ್ಪಿಪರಿವಾರ್‌ನಲ್ಲಿ ಆ ಭಾಗದ ಕಲೆಯನ್ನು ಜೀವಂತವಾಗಿಡುವ ಪ್ರಯತ್ನಗಳು ಆಗುತ್ತಿವೆ. ಇದು ಸ್ವಾಯತ್ತ ಸಂಸ್ಥೆಯಾಗಿ ೧೯೮೮ರಲ್ಲಿ ಪ್ರಾರಂಭಿಸಲ್ಪಟ್ಟಿತು. ಬಸ್ತಾರ್‌ನ ವಿವಿಧ ಕುಶಲಕಲಾ ಪ್ರಕಾರಗಳಿಗೆ ಗಮನಾರ್ಹ ಕೊಡುಗೆ ನೀಡಿರುವ ಆದಿವಾಸಿ ಕಲಾವಿದರಾದ ಜೈದೇವ್ ಬಾಘೆಲ್, ಸೋನಾಧರ್ ವಿಶ್ವಕರ್ಮ, ಜಗದೇವ್, ಸಹದೇವ್. ಮೊದಲಾದವರ ದೂರದೃಷ್ಟಿ ಮತ್ತು ಪರಿಶ್ರಮಗಳಿಂದ ಈ ಸಂಸ್ಥೆ ಹುಟ್ಟಿದೆ. ಅಲ್ಲಿನ ಕುಶಲ ಕಲಾಕಾರರ ಪುರೋಭಿವೃದ್ಧಿಗೂ ಈ ಸಂಸ್ಥೆ ನೆರವಾಗುತ್ತಿದೆ. ಕಿರಿಯರಿಗೆ ಆದಿವಾಸಿ ಕಲೆಯನ್ನು

ಕಲಿಸುವ, ಕಲಾ ಸೃಷ್ಟಿಯಲ್ಲಿ ತಾಂತ್ರಿಕವಾಗಿ ನೆರವಾಗುವ ಕೆಲಸ ನಡೆದಿದೆ. ಇಲ್ಲಿನ ಮರದ ಮತ್ತು ಶಿಲೆಯ ಉಬ್ಬುಶಿಲ್ಪಗಳಲ್ಲಿ ಪುರಾಣಗಳು ದೇವಾನುದೇವತೆಗಳು ಇತ್ಯಾದಿಗಳ ಜೊತೆಗೆ ಮುಖ್ಯವಾಗಿ ಬಸ್ತಾರಿನ ಆದಿವಾಸಿ ಬದುಕನ್ನು ಕಾಣಬಹುದು. ಬಸ್ತಾರಿನ ಮನೆಗಳ ಗೋಡೆಗಳ ಮೇಲೆ ವಿಶೇಷವಾಗಿ ಧಂಕುಲ್ ಜಾಗರೆ ಲಕ್ಷಿಜಾಗರ್, ದೀಯಾರಿ (ದೀಪಾವಳಿ)ಇತ್ಯಾದಿ ಹಬ್ಬಗಳಲ್ಲೇ ಅಲ್ಲದೆ ಜಾತ್ರೆಗಳ ಕಾಲದಲ್ಲಿ ನೈಸರ್ಗಿಕವಾಗಿ ಸಿಗುವ ಬಣ್ಣಗಳಿಂದ ಚಿತ್ರಿಸುವ ಪರಂಪರೆಯಿದೆ. ಆ ಶೈಲಿಯ ಭಿತ್ತಿ ಚಿತ್ರಕಲೆಯನ್ನು ಇಲ್ಲಿ ಕಲಿಸಲಾಗುತ್ತಿದೆ. ಈ ಚಿತ್ರಗಳು ಕಲಾವಿದರ ಮುಗ್ಧತೆಯನ್ನು ಪ್ರದರ್ಶಿಸುವಂತೆ ಚಪ್ಪಟೆ ಅವಕಾಶದಲ್ಲಿ ರೇಖೆಗಳಿಂದ ಮೂಡಿಬರುತ್ತವೆ. ಕೊಂಡಗಾವ್‌ನ ಬಸ್ತಾರ್ ಶಿಲ್ಪಿ ಪರಿವಾರ್‌ನಲ್ಲಿ ಬಸ್ತಾರ್ ಆದಿವಾಸಿ ಚಿತ್ರಕಲೆಯನ್ನು ನಾರಾಯಣ ಪುರದ ಸುಖರಾಮ್ ಹುಸೆಂಡಿ, ಶಿಲೆಯ ಕೆತ್ತನೆಯನ್ನು ರೈತೂರಾಮ್ ಲೋಹದ ಶಿಲ್ಪವನ್ನು ಲೋಕಾಮನ್ ಕಲಿಸುತ್ತಿದ್ದಾರೆ. ಈ ಎಲ್ಲ ಸೃಷ್ಟಿಗಳಲ್ಲೂ ಪುರಾಣಗಳು, ಜಾನಪದಕತೆಗಳು ಪ್ರಾಮುಖ್ಯತೆಯನ್ನು ಪಡೆದಿರುತ್ತವೆ. ಟೆರಾಕೋಟಾ ಮಾಧ್ಯಮದಲ್ಲಿನ ಸೃಷ್ಟಿಗಳು ಬೆಲ್ ಲೋಹದ ಶಿಲ್ಪಗಳು ಅತ್ಯಂತ ಅಲಂಕಾರಗಳನ್ನು ಕುಶಲತೆಯಿಂದ ಹೊಂದಿಸಿಕೊಂಡು ಮೂಡಿಬರುತ್ತವೆ. ಟೆರಾಕೋಟಾ ಶಿಲ್ಪಗಳು ಅದೃಷ್ಟ ಮತ್ತು ಸಂತೋಷಗಳ ಸಂಕೇತವಾಗಿ ಕಾಣಲ್ಪಡುತ್ತವೆ. ಶಿಲೆಯಲ್ಲಿ ದಿನ ಬಳಕೆಗೆ ಅಗತ್ಯವಾದ ಹಲವು ಪರಿಕರಗಳನ್ನೇ ಅಲ್ಲದೆ ದೇವದೇವಿಯರನ್ನು ಶಿಲ್ಪಿಸುವ ಅಲ್ಲಿನ ಪರಂಪರೆ ಇಂಥ ಸಂಸ್ಥೆಗಳಿಂದ ಮುಂದುವರೆದಿದೆ.

ಹಿಂದಿನ ಆದಿವಾಸಿಗಳ ಶಿಲ್ಪಗಳನ್ನು ಇಂದು ಬಾರಸೂರು, ನಾರೇನ್ ಪಾಲ್, ಬಸ್ತಾರ್ ಹಳ್ಳಿಗಳಲ್ಲಿ ಕಾಣಬಹುದು. ಬೆಲ್ ಲೋಹದ ಕುಶಲಕಲೆ ಅಥವಾ ಧೋಕ್ರ ಎಂಬ ಹೆಸರಿನಡಿ ಸೃಷ್ಟಿಯಾಗುವ ಶಿಲ್ಪಗಳೂ ಹೆಚ್ಚು. ಇವನ್ನು ಘಡ್ವಾ ಕ್ರಾಫ್ಟ್ ಎಂದೂ ಕರೆಯುವುದುಂಟು. Lost Wax ಕ್ರಮದಿಂದ ಈ ಶಿಲ್ಪಗಳು ಸೃಷ್ಟಿಯಾಗುತ್ತವೆ.



ಓರ್ಛಾ ಲಕ್ಷ್ಮೀನಾರಾಯಣ ದೇವಾಲಯದ ಭಿತ್ತಿಚಿತ್ರ.



ಕಿಲೇಪಾಲ್‌ನ ಒಂದು ಗೋರಿಕಲ್ಲು ಚಿತ್ರಗಳು.

ಮಧ್ಯಪ್ರದೇಶದ ಗ್ರಾಮೀಣ ಭಾಗಗಳಲ್ಲಿ ಹೋಳಿ, ದೀಪಾವಳಿ ದಸರಾ ಮತ್ತು ನಾಗಪಂಚಮಿಗಳ ಸಂದರ್ಭದಲ್ಲಿ ಮಹಿಳೆಯರು ಮನೆಯ ಗೋಡೆಗಳಿಗೆ ಸಗಣಿಯನ್ನು ಬಳಿಯುತ್ತಾರೆ. ಅದರ ಮೇಲೆ ಆಯಾ ಭಾಗದ ವಿಶಿಷ್ಟ ಸಾಂಪ್ರದಾಯಗಳ ವಿನ್ಯಾಸಗಳನ್ನು ರೇಖಿಸುತ್ತಾರೆ.

ಬಸ್ತಾರ್ ಜಿಲ್ಲೆಯ ಜಗದಲಪುರದ ಸುತ್ತಮುತ್ತ ಅರಣ್ಯಗಳ ಹಾದಿಗಳಲ್ಲಿ ಆದಿವಾಸಿಗಳು ವಾಸವಿರುವ ಹಳ್ಳಿಗಳನ್ನು ಎಚ್ಚರದಿಂದ ಹೊಕ್ಕರೆ ಮಣ್ಣಿಗೆ ಹತ್ತಿರವಾದ ದಟ್ಟ ಬದುಕಿನ ದರ್ಶನವಾಗುತ್ತದೆ. ಜಗದಲಪುರ - ಗೀದಂ ಹಾದಿಯ. ೪೫

ಕಿಲೋಮೀಟರ್ ದೂರದ ಕಿಲೇವಾಲ್, ಬಸ್ತನಾರ್, ಕೊಡೆನಾರ್ ಗ್ರಾಮಗಳಲ್ಲಿ ಸತ್ತವರ ಗೋರಿಗಳ ಮೇಲೆ ನೆಟ್ಟ ಗೋರಿ ಕಲ್ಲುಗಳು (Steles) ಆಕರ್ಷಕ. ಅದರಲ್ಲೂ ಕಾಡುಕೋಣದ ಕೊಂಬುಗಳ ಮಾರಿಯಾ ಆದಿವಾಸಿಗಳ ಗೋರಿಕಲ್ಲುಗಳು ಅತ್ಯಂತ ಸುಂದರ. ಮರದಲ್ಲಿ ಸ್ವಲ್ಪ ಆಳಕ್ಕೆ ಕೆತ್ತಿ ಉಬ್ಬು ಶಿಲ್ಪಗಳಂತೆ ರೂಪಿಸಿದ ಸೃಷ್ಟಿಗಳವು. ಉಳುವ ದೃಶ್ಯಗಳು, ಕುದುರೆಸವಾರಿ, ಆನೆಸವಾರಿ, ಕೆಲಸದಲ್ಲಿ ನಿರತ ಮಹಿಳೆಯರು ಇತ್ಯಾದಿಗಳನ್ನು ಕಾಣಬಹುದು. ಈ ರೂಪಗಳು ಇತಿಹಾಸ ಪೂರ್ವ ಶಿಲಾಶ್ರಯಗಳ ಚಿತ್ರಗಳಿಗೆ ಅತ್ಯಂತ ಹತ್ತಿರವಾಗಿವೆ. ಮರದ ಈ ಗೋರಿಕಲ್ಲುಗಳು ಕಾಲಾನಂತರದಲ್ಲಿ ಕಲ್ಲಿನ ಚಪ್ಪಡಿ, ಗಾರೆ ಇಟ್ಟಿಗೆಯ ಸ್ಮಾರಕ ಇತ್ಯಾದಿಗಳಿಗೂ ಬದಲ್ಗೊಂಡಿದೆ. ಇಂಥ ಕಲ್ಲಿನ ತೆಳು ಚಪ್ಪಡಿಯ ಮೇಲಿನ ವರ್ಣ ಚಿತ್ರಗಳು ಗಮನಸೆಳೆಯುತ್ತವೆ. ಕೆಲವೊಮ್ಮೆ ಸತ್ತವ್ಯಕ್ತಿಯ ಬದುಕಿನ ದಾಖಲೆಯಂತೆಯೂ ಬಾಸವಾಗುತ್ತವೆ. ಗೀದಂ ಊರಿನ ಹತ್ತಿರದ ಜೌಲುಂಗ ಹಳ್ಳಿಯ ಸುತ್ತ ಮುತ್ತ ಇರುವ ಹಲವು ಊರುಗಳಲ್ಲಿ, ಕೆಲವೊಮ್ಮೆ ಕಾಡಿನ ನಡುವೆ ಇಂಥ ಗೋರಿಕಲ್ಲುಗಳು ಅತ್ಯಂತ ಸುಂದರವಾಗಿವೆ. ಕಿಲೇವಾಲ್, ಬಸ್ತನಾರ್, ಕೊಡೇನಾರ್‌ಗಳಲ್ಲಿನ ಇಂಥ ಸೃಷ್ಟಿಗಳೂ ಗಮನಾರ್ಹ.

ಹಚ್ಚೆ (Tattoo)


ದೇಹವನ್ನು ಕ್ಯಾನ್‌ವಾಸಿನಂತೆ ದುಡಿಸಿಕೊಂಡ ಕಲಾವಿದರಿಗಿಂತಲೂ ಬಹಳ ಮೊದಲಿನಿಂದಲೇ ಹೆಣ್ಣಿನ ದೇಹವನ್ನು ಹಚ್ಚೆಯಿಂದ ಅಲಂಕರಿಸುವ ಪರಿ ವಿಶ್ವದ ಹಲವಡೆ ಇರುವಂತೆ ಮಧ್ಯಪ್ರದೇಶದ ಆದಿವಾಸಿಗಳಲ್ಲೂ ಇದೆ. ರಾಜ್ಯದ ಇನ್ನಿತರ ಭಾಗಗಳಿಗಿಂತಲೂ ಚಿತ್ತೀಸ್‌ಗಡದ ಹೆಣ್ಣುಗಳಿಗೆ ಹಚ್ಚೆಯ ಆಸೆ ಹೆಚ್ಚು. ತರಕಾರಿಯ ವರ್ಣದ್ರವ್ಯ (Dye)ಗಳಿಂದ ವಿಶಿಷ್ಟ ಚಿತ್ರ ಸಂಕೇತಗಳನ್ನು ಅಲಂಕರಿಸಿಕೊಳ್ಳುತ್ತಾರೆ. ರಾಮಲಕ್ಷ್ಮಣ ಸೀತೆ, ಸೀತೆಯ ಅಡಿಗೆಮನೆ, ಮಾವು, ಕರ್ಜೂರ, ಹೂ, ಹಣ್ಣುಗಳು, ನವಿಲುಗಳು ಬಾವಿ, ಪಾದಗಳು ಇತ್ಯಾದಿಗಳನ್ನು ಹೆಚ್ಚಾಗಿ ಕಾಣಬಹುದು.

ಇನ್ನು ಇತಿಹಾಸ ಕಾಲಕ್ಕೆ ಬಂದರೆ ಕ್ರಿಸ್ತಪೂರ್ವ ೩ನೆಯ ಶತಮಾನದಿಂದ ಕ್ರಿಸ್ತಶಕ ೧೨ನೆಯ ಶತಮಾನದ ನಡುವೆ ಅರಳಿದ ಭೌದ್ಧಧರ್ಮೀಯ ಕಲೆಗೆ ಭೂಪಾಲದ ಬಳಿ ಇರುವ ಸಾಂಚಿಯ ಸ್ತೂಪಗಳು ಉದಾಹರಣೆಗಳಂತಿವೆ. ಸುತ್ತಲಿನ ೨೦ ಕಿಲೋಮೀಟರುಗಳ ಅಂತರದೊಳಗಿರುವ ಅಂದೇರ್, ಸೋನಾರಿ, ಸತ್ ಧಾರಾ, ಮತ್ತು ಪಿಪಾಲಿಯಾಗಳಲ್ಲಿ ಈ ಕಲೆ ಹಂಚಿಹೋಗಿದೆ. (ರಾಜ್ಯದ ಪಶ್ಚಿಮಕ್ಕಿರುವ ಧಾರ್ ಜಿಲ್ಲೆಯಲ್ಲಿ ಕುಕ್ಷಿ ಮತ್ತು ಸರ್‌ದಾರ್‌ಪುರಗಳ ನಡುವೆ ಬಾಗ್ ಗುಹೆಗಳಲ್ಲೂ ಭೌದ್ಧವಾಸ್ತು ಶಿಲ್ಪ, ಶಿಲ್ಪ, ಭಿತ್ತಿ ಚಿತ್ರಗಳಿರುವುದನ್ನು ನೆನಪಿಸಿಕೊಳ್ಳಬಹುದು) ಮೌರ್ಯರು ಅಶೋಕನ ಕಾಲದಿಂದ

ಆರಂಭಗೊಂಡ ಸಾಂಚಿಯ ವಾಸ್ತುಶಿಲ್ಪ-ಶಿಲ್ಪಕಲೆ ಗುಪ್ತರಕಾಲದಲ್ಲಿ ಪುನರಾರಂಭಗೊಂಡಿತು. ನಡುವೆ ಹಲವು ರಾಜಕೀಯ ಬದಲಾವಣೆಗಳ ನಂತರ. ಹರ್ಷವರ್ಧನನ ಕಾಲದಲ್ಲಿ (ಕ್ರಿ.ಶ. 606-647) ಇಲ್ಲಿ ಗಣನೀಯ ಸೃಷ್ಟಿಗಳು ಮೂಡಿಬಂದವು ಭೂಪಾಲ್ ವಿದಿಶಗಲ ರಸ್ತೆಯಲ್ಲಿ ಇರುವ ಸಾಂಚಿಗೆ ಭೂಪಾಲ್‌ನಿಂದ ರೈಲಿನಲ್ಲೂ ಹೋಗಬಹುದು. ಗುಡ್ಡದ ಮೇಲಿನ ಸ್ತೂಪಗಳು ಸೂರ್ಯಾಸ್ತದ ಸಂಜೆಯ ಸಮಯದಲ್ಲಿ ನೀಡುವ ಅನುಭವ ಅವರ್ಣನೀಯ. ಇತ್ತೀಚೆಗೆ ಸಮೀಪದ ಸಲಾಮತ್‌ಪುರ ಬಳಿಯ ಉತ್ಖನನದಲ್ಲಿ ಕೆಲವು ಸ್ತೂಪಗಳು ಕಾಣಿಸಿಕೊಂಡಿವೆ.

ಉದಯಗಿರಿ ಗುಹೆಗಳು

ಸಾಂಚಿಯಿಂದ ೧೩ ಕಿಲೋಮೀಟರ್‌ಗಳ ದೂರದಲ್ಲಿರುವ ಉದಯಗಿರಿ ಗುಹೆಗಳು ಕ್ರಿಸ್ತಶಕ ೪ರಿಂದ ೫ನೆಯ ಶತಮಾನದವರೆಗೂ ರೂಪುಗೊಂಡಿವೆ. ೨ನೆಯ ಚಂದ್ರಗುಪ್ತನ ಆಳ್ವಿಕೆಯ ಅವದಿಯಲ್ಲಿ ಆರಂಭಗೊಂಡ ಇಲ್ಲಿನ ಗುಹೆಗಳು ನಂತರದ ಹಲವರ ಆಳ್ವಿಕೆಯಲ್ಲಿ ಅರಳಿಕೊಂಡವು. ಸ್ವಲ್ಪ ನಸುಗೆಂಪು ಮರಳುಗಲ್ಲಿನ ಶಿಲ್ಪಗಳು ಅದ್ಭುತವಾಗಿ ರೂಪುಗೊಂಡವು. ಇವುಗಳಲ್ಲಿ ೫ನೆಯ ಗುಹೆಯ ಮರಾಹಾವತಾರದ ಶಿಲ್ಪವಿಖ್ಯಾತ. ಮಲಗಿರುವ ವಿಷ್ಣುವಿನ ಶಿಲ್ಪ ಕಾಲದ ಹೊಡೆತಕ್ಕೆ ಬಹುಪಾಲು ಸವೆದು ಹೋಗಿದೆ. ಕಾಳಿದಾಸನ ಮೇಘದೂತದಲ್ಲಿ ಪ್ರಸ್ತಾಪಿಸಲಾಗಿರುವ ವಿದಿಶಶುಂಗ, ನಾಗ, ಶಾತವಾಹನ ಮತ್ತು ಗುಪ್ತರ ಕಾಲದಲ್ಲಿ ಖ್ಯಾತನಗರವಾಗಿತ್ತು. ಚಕ್ರವರ್ತಿ ಅಶೋಕ ಈ ನಗರದ ಗವರ್ನರ್ ಆಗಿದ್ದನು. ೬ನೆಯ ಶತವಾನದ ನಂತರ ಈ ನಗರ ಕೇಳುವವರಿಲ್ಲದಂತಾಯಿತು. ಮಧ್ಯಯುಗದಲ್ಲಿ (ಕ್ರಿ.ಶ. ೯ ರಿಂದ ೧೨ನೆಯ ಶತಮಾನಗಳು) ಪುನಃ ಬಿಲ್ಸಾ ಎಂಬ ಹೆಸರಿನಲ್ಲಿ ಪ್ರವರ್ಧಮಾನಕ್ಕೆ ಬಂದಿತು ನಂತರ ಮಾಳ್ವದ



ಉದಯಗಿರಿಯ ಉಬ್ಬುಶಿಲ್ಪ.

ಸುಲ್ತಾನರು, ಮೊಗಲರು ಮತ್ತು ಸಿಂಧಿಯಾ ಮನೆತನಗಳಿಗೆ ಕ್ರಮೇಣ ವರ್ಗಾಯಿಸಲ್ಪಟ್ಟಿತು. ನಮ್ಮಲ್ಲಿ ಮೊದಲಬಾರಿ ಅಸ್ತಿಬಾರದ ಕಲ್ಲುಗಳನ್ನು ಸುಣ್ಣದ ಗಾರೆಯೊಂದಿಗೆ ಸಿಮೆಂಟ್ ಮಾಡಿದ ದೇವಾಲಯವೆಂದು ಪರಿಗಣಿಸಲ್ಪಟ್ಟಿರುವ, ಕ್ರಿಸ್ತಪೂರ್ವ ೨ನೆಯ ಶತಮಾನದ ವಿಷ್ಣುದೇವಾಲಯವೊಂದನ್ನು ಇತ್ತೀಚಿನ ವರ್ಷಗಳಲ್ಲಿ ಇಲ್ಲಿ ಕಂಡುಕೊಳ್ಳಲಾಗಿದೆ. ಅದರ ಜಗತಿಯು ಅತ್ಯುನ್ನತವಾದುದು. ಮಧ್ಯಯುಗದಲ್ಲಿ ವಿದೇಶೀಯ ದಾಳಿಕಾರರಿಂದ ವಿನಾಶಕ್ಕೊಳಗಾದ ದೇವಾಲಯಗಳಲ್ಲಿ ಇದೊಂದು. ಹತ್ತಿರದ (೪೧ ಕಿ.ಮೀ.) ಗ್ಯಾರಸ್‌ಪುರದಲ್ಲಿ ೯ ಮತ್ತು ೧೦ನೆಯ ಶತಮಾನಕ್ಕೆ ಸೇರಿದ ೨ ದೇವಾಲಯ ೮ ಮತ್ತು ೪ ಕಂಬಗಳು ಅಂದಿನ ಕುಶಲಿಗಳ ಚತುರತೆಗೆ ಸಾಕ್ಷಿಯಂತಿವೆ. ವಿದಿಶದ ಮ್ಯೂಸಿಯಂನಲ್ಲಿ ಆ ಭಾಗದ ಅತ್ಯಂತ ಹಳೆಯ ಕಾಲದ ಶಿಲ್ಪಗಳನ್ನು ಸಂಗ್ರಹಿಸಲಾಗಿದೆ. ಅತ್ಯಂತ ಕೆಟ್ಟ ರೀತಿಯಲ್ಲಿ ಅವುಗಳನ್ನು ನಿರ್ಲಕ್ಷಿಸಲಾಗಿದೆ. ಶುಂಗರ ಕಾಲದಿಂದಾರಂಭಿಸಿ ಪಾರಮಾರರ ಕಾಲದವರೆಗೂ ಅರಳಿದ ಶಿಲೆಯ ಮತ್ತು ಟೆರಾಕೋಟಾ ಶಿಲ್ಪಗಳಲ್ಲಿ ಸೂರ್ಯ, ಚಾಮುಂಡಿ ಮತ್ತು ಯಕ್ಷಿಯ ಶಿಲ್ಪಗಳು ಉಲ್ಲೇಖಾರ್ಹ.

ಭೂಪಾಲದಿಂದ ೯೦ ಕಿ.ಮೀ. ದೂರದಲ್ಲಿರುವ ಉದಯಪುರದಲ್ಲಿ ಕ್ರಿ.ಶ. ೧೧ನೆಯ ಶತಮಾನದ ಪಾರಮಾರರ ಶಿಲ್ಪಕಲೆಗೆ ಉತ್ತಮ ಉದಾಹರಣೆಯಂಥ ನೀಲಕಂಠೇಶ್ವರ ದೇವಾಲಯವಿದೆ. ಮಧ್ಯಪ್ರದೇಶದಲ್ಲಿ ಕ್ರಿ.ಶ.೧೦ ಮತ್ತು ೧೨ನೆಯ ಶತಮಾನಗಳ ನಡುವಿನ ಅವಧಿಯಲ್ಲಿ ಅಲ್ಲಿಯದೇ ಆದ ವಿಶಿಷ್ಟ ಶೈಲಿಯ ದೇಗುಲಗಳು ರೂಪುಗೊಂಡವು. ಈ ರಾಜ್ಯದ ಪೂರ್ವದಲ್ಲಿ ಕಳಚೂರ್ಯರು ಮಧ್ಯಭಾಗದಲ್ಲಿ ಚಾಂಡೇಲರು, ಪಾರಮಾರರು ಹೆಚ್ಚಾಗಿ ಪಶ್ಚಿಮಭಾಗದಲ್ಲಿ ಮತ್ತು ಕಚ್ಚಪಘಾಟರು ಮುಖ್ಯವಾಗಿ ಉತ್ತರ ಭಾಗದಲ್ಲಿ ಇಂಥ ದೇವಾಲಯ ಶಿಲ್ಪ ಸೃಷ್ಟಿಯಾಗಲು ಕಾರಣರಾದರು.

<u>ಖಜರಾಹೋ ದೇವಾಲಯಗಳು</u>

ಚಾಂಡೇಲರ ದೇವಾಲಯಗಳಲ್ಲಿ ಮುಖ್ಯವಾಗಿ ಖಜರಾಹೋದಲ್ಲಿ ನೀಳವಾದ ಶಿಖರವನ್ನು ಎತ್ತಿ ಹಿಡಿಯುವಂತೆ ಸುತ್ತ ಬಿಚ್ಚಿಕೊಂಡ ಚಿಕ್ಕ ಚಿಕ್ಕ ಗೋಪುರಗಳು ವಿಶಿಷ್ಟವಾಗಿ ಎದ್ದು ಕಾಣುತ್ತವೆ. ದೇವಾಲಯ ವಾಸ್ತುಶಿಲ್ಪ ಮತ್ತು ಶಿಲ್ಪಗಳು ಕೌಶಲದಲ್ಲಿ ಶಿಲ್ಪಿಗಳ ಕೈಚಳಕ ಗಮನಿಸುವಂತಿದೆ ಚೌಸಾತ್ ಯೋಗಿನಿ, ಬ್ರಹ್ಮ ಮತ್ತು ಮಹದೇವ ದೇವಾಲಯಗಳು ಗ್ರಾನೈಟ್ ಕಲ್ಲಿನವಾದರೆ ಉಳಿದವು ಕಂದು, ನಸುಹಳದಿಯ ಮರಳುಗಲ್ಲಿನವು. ಕ್ರಿ.ಶ. ೯೫೪ ರಿಂದಲೇ ಯಶೋವರ್ಮನಿಂದ ಲಕ್ಷ್ಮಣ ದೇವಾಲಯ ಕಟ್ಟಲ್ಪಟ್ಟಿತು. ಚಾಂಡೇಲರ ಕಲಾಗೌರವಕ್ಕೆ ಅತ್ಯುತ್ತಮ ಉದಾಹರಣೆ ಈ ದೇವಾಲಯ. ಖಜರಾಹೋದ ಶಿಲ್ಪಗಳ ವರ್ಣನೆ ಇಲ್ಲಿ ಅನಗತ್ಯವೆನ್ನುವಷ್ಟು ವಿಖ್ಯಾತ, ವಿಶ್ವನಾಥ, ಪಾರ್ಶ್ವನಾಥ, ವೈದ್ಯನಾಥ, ಜಗದಾಂಬಿ, ಚಿತ್ರಗುಪ್ತ, ವಾಮನ, ಆದಿನಾಥ, ಜವೇರಿ, ಕಂಡಾರಿಯಾ ಮಹದೇವ ಮೊದಲಾದ ದೇವಾಲಯಗಳ ಅರ್ಧಮಂಟಪ, ಮಂಟಪ, ಮಹಾಮಂಟಪ, ಅಂತರಾಳ, ಗರ್ಭಗೃಹಗಳ ಒಳ-ಹೊರ ಭಾಗಗಳು ಹಲವು ಹತ್ತು ಬಾರಿ ನೋಡುವಂತೆ ಮಾಡುತ್ತವೆ. ಅವುಗಳ ಎತ್ತರದ ಜಗತಿಗಳು ಆಕರ್ಷಕ. ಮಿಥುನ



ಖಜರಾಹೋದ ಉಬ್ಬುಶಿಲ್ಪಗಳು.

ಶಿಲ್ಪಗಳು ಅಮರಾವತಿ ಮತ್ತು ಮಧುರಾ ಶಿಲ್ಪಶೈಲಿಗಳಲ್ಲೂ, ಶುಂಗರ ಕಾಲದಲ್ಲೂ ರೂಪುಗೊಂಡು ಬೆಳವಣಿಗೆ ಕಂಡಿವೆ. ಪರಿವಾರ, ಪಾರ್ಶ್ವ, ಆವರಣ ದೇವತೆಗಳು, ದಿಕ್ಪಾಲಕರು, ಅಪ್ಸರೆಯರು, ಸುರಸುಂದರಿಯರು ಮೊದಲಾದ ಶಿಲ್ಪಗಳು ಈಗ ವಿಖ್ಯಾತ, ಮಾನವದೇಹದ ವಿಷಯ ಲಂಪಟತ್ವ ಮೀರಿದ ಅನಂತ ಸೌಂದರ್ಯವನ್ನು ಆ ಕಾಲಕ್ಕೆ ಹಲವು ಶೈಲಿಗಳನ್ನು ಮೀರಿದ ಅಭಿವ್ಯಕ್ತಿಯಾಗಿ ಇಲ್ಲೆಲ್ಲಾ ತಂದುಕೊಂಡಿರುವ ಅನುಭವವನ್ನು ಈ ಶಿಲ್ಪಗಳು ನೀಡುತ್ತವೆ.

ಹೋಗಿ ನೋಡಲು ಸರಿಯಾದ ದಾರಿಯೇ ಇಲ್ಲದ ಶಕ್ತಿಯಾರಾಧನೆಯ ಗ್ರಾನೈಟ್ ಕಲ್ಲಿನ ವಿಶಾಲ ಜಗತಿಯ ಚೌಸಾತ್ ಯೋಗಿನಿ ದೇವಾಲಯದ ಗರ್ಭಗೃಹಗಳಲ್ಲಿ ಮೂಲ ಶಿಲ್ಪಗಳೇ ಇಲ್ಲದೆ ಬಿಕೋ ಎನ್ನುತ್ತಿವೆ. ಈಗ ಉಳಿದುಕೊಂಡಿರುವ ೩೫ ಪುಟ್ಟ ಗರ್ಭಗೃಹಗಳು ಕುತೂಹಲವನ್ನುಂಟು ಮಾಡುತ್ತವೆ. ಇಲ್ಲಿನ ಜಗತಿ ಖಜರಾಹೋದ ಇನ್ನಿತರ ದೇವಾಲಯಗಳಂತೆ ಎತ್ತರವಾಗಿದೆಯಾದರೂ ಅದು ನಮ್ಮ ದೇಶದ ಇನ್ನಿತರ ಯೋಗಿನಿ ದೇವಾಲಯಗಳಂತೆ ವೃತ್ತಾಕಾರದಲ್ಲಿಲ್ಲ; ಆಯತಾಕಾರದಲ್ಲಿದೆ. (ಶಕ್ತಿಪೂಜೆಯ ಮತ್ತೊಂದು ಚೌಸಾತ್ ಯೋಗಿನಿ ದೇವಾಲಯ ಜಬ್ಬಲ್ ಪುರದ ಬಳಿ ಭೇರಘಾಟ್‌ನಲ್ಲಿದೆ. ಪಶ್ಚಿಮದಲ್ಲಿ ದಟ್ಟಹಸಿರು ಕಾಡು, ಪೂರ್ವದಲ್ಲಿ ಸದಾ ಹರಿವ ನರ್ಮದಾನದಿ, ಉತ್ತರದಲ್ಲಿ ಅಮೃತಶಿಲಾ ಸಂಕುಲಗಳನ್ನೊಳಗೊಂಡ ರಮ್ಯ ಪ್ರಕೃತಿಯ ನಡುವೆ ಇದೆ. ಇದರ ಜಗತಿ ಮತ್ತು ಪ್ರಾಕಾರ ವೃತ್ತಾಕಾರದಲ್ಲಿದೆ. ಈ ದೇವಾಲಯವನ್ನು ರಾಜಾನರಸಿಂಹ ದೇವ ಕ್ರಿ.ಶ.೧೧೫೫ರಲ್ಲಿ ಪೂರ್ಣಗೊಳಿಸಿದನು) ವರಾಹ ಮಂದಿರದ ವಿಷ್ಣುವಿನ ವರಾಹಾವತಾರದ ಕಲ್ಪನೆ ಆಕರ್ಷಕವಾಗಿ ಕೆತ್ತಲ್ಪಟ್ಟಿದೆ. ಉದಯಗಿರಿಯಲ್ಲಿ ಉಬ್ಬು ಶಿಲ್ಪವಾದರೆ ಇದು ಸುತ್ತಲೂ ನೋಡಿಸಿಕೊಳ್ಳುವ ಶಿಲ್ಪ (ದೇವಗಡ್‌ನಲ್ಲೂ ಇಂಥ ಶಿಲ್ಪವಿದೆ) ವರಾಹದ ದೇಹದ ಮೇಲೆಲ್ಲಾ ವೈಷ್ಣವ ದೇವ ದೇವತೆಗಳನ್ನು ಅತ್ಯಂತ ಕುಶಲತೆಯಿಂದ ಕೊರೆಯಲಾಗಿದೆ. ಇಲ್ಲಿನ ಜೈನದೇವಾಲಯಗಳ ಸಮೂಹದಲ್ಲಿ ಸರಳವಾದ ಆದಿನಾಥ

ದೇವಾಲಯದ ಮುಖ ಮಂಟಪದ ಸೂರಿನಲ್ಲಿ ಬಣ್ಣಗಳಿಂದ ಅಲಂಕರಿಸಿದ ವಿನ್ಯಾಸಗಳಿವೆ; ಚೂರು ಪಾರು ಉಳಿದುಕೊಂಡಿವೆ. ಹಾಗೆ ನೋಡಿದರೆ ವಿಶ್ವನಾಥ ದೇವಾಲಯದ ಬಳಿಯಿರುವ ಒಂದು ಪುಟ್ಟ ಸರಳ ೪ ಗೋಡೆಗಳ ಕಟ್ಟಡದಂಥ ದೇವಾಲಯದ ಹೊರಭಾಗಗಳಲ್ಲಿ ಭಿತ್ತಿಚಿತ್ರಗಳ ತುಣುಕುಗಳಿವೆ. ಚಾಂದೇಲರ ಕಾಲದಲ್ಲಿ ಚಿತ್ರಕಲೆಯೂ ಉತ್ತಮ ನೆಲೆಯಲ್ಲಿದ್ದಿರಬೇಕು. ಛತ್ತರ್ ಪುರ ಮಾವು ಊರುಗಳ ನಡುವಿನ ಮತ್ತೊಂದು ಐತಿಹಾಸಿಕ ಹಳ್ಳಿಯಲ್ಲಿರುವ ಬೃಹತ್ ವಸ್ತುಸಂಗ್ರಹಾಲಯದಲ್ಲಿರುವ ಚಿತ್ರಕಲಾಕೃತಿ ಆ ಕಾಲದ್ದೇ ಇರಬೇಕು. (ಖಜರಾಹೋದಿಂದ ೧೫.ಕಿ.ಮೀ. ದೂರದಲ್ಲಿರುವ ಪ್ರೇಮಗಿರ್ ಮಹಾರಾಜ್ ಎಂಬ ಸಂನ್ಯಾಸಿ ಕಲಾವಿದ ತಾಂತ್ರಿಕ್ ಚಿತ್ರಕಲೆಯನ್ನು ಇಂದಿಗೂ ಅತ್ಯಂತ ಆಸಕ್ತಿಯಿಂದ ಕ್ಯಾನ್‌ವಾಸ್ ಮೇಲೆ ಚಿತ್ರಿಸುತ್ತಾರೆ) ಸುಮಾರು ಕ್ರಿ.ಶ.೧೩೫೦ಮತ್ತು ೧೫೫೦ರ ನಡುವೆ ಗುಜರಾತ್ ರಾಜಸ್ತಾನ್, ದೆಹಲಿಗಳಲ್ಲಿ ಹಾಗೂ ಮಧ್ಯಪ್ರದೇಶದ ಗ್ವಾಲಿಯಾರ್ ವಿಭಾಗಗಳಲ್ಲಿ ಚಿತ್ರಾಲಂಕೃತ ಹಸ್ತಪ್ರತಿಗಳಲ್ಲಿ ಬೆಳ್ಳಿ ಮತ್ತು ಬಂಗಾರಗಳನ್ನು ಧಾರಾಳವಾಗಿ ಬಳಸಿ ಕೊಳ್ಳಲಾಯಿತು. ಆ ಸಂದರ್ಭದ ಜೈನ ಸಂಪ್ರದಾಯ "ಚಾರು ಪಂಚಶಿಕಾ ಶೈಲಿ"ಯನ್ನು ಹೊಂದಿಸಿಕೊಂಡಿತು. ತಾಳೆಗರಿಯ ಸ್ಥಾನವನ್ನು ಕಾಗದ ಆಕ್ರಮಿಸಿತು. ಗ್ವಾಲಿಯಾರ್‌ನಲ್ಲಿ ಕ್ರಿ.ಶ.೧೪೪೧ರಲ್ಲಿ ಪಾಸನಾಹುಚಾರಿಯು ಚಿತ್ರಿತಗೊಂಡರೆ, ಧಾರ್‌ಜಿಲ್ಲೆಯ ಮಾಂಡುವಿನ ಕಲ್ಪಸೂತ್ರ ೧೪೩೯ರಲ್ಲಿ, ಜೌನಾಪುರದ ಕಲ್ಪಸೂತ್ರ೧೪೬೫ರಲ್ಲಿ ಚಿತ್ರಿತಗೊಂಡವು. ೧೭ನೆಯ ಶತಮಾನದಲ್ಲಿ ಈ ಪರಂಪರೆ ಕಣ್ಮರೆಯಾಯಿತು. ಜಗದಲ ಪುರದಿಂದ ಚಿತ್ರಕೂಟದ ಹಾದಿಯಲ್ಲಿ ಬೃಹತ್ ಮರಕೊರೆದು ರೂಪಿಸಿದ ದೋಣಿಯಲ್ಲಿ ಇಂದ್ರಾವತಿ ನದಿಯನ್ನು ದಾಟಿ ಪಶ್ಚಿಮಕ್ಕೆ ೩.ಕಿ.ಮೀ. ನಡೆದರೆ ನಾರಾಯಣಪಾಲ್‌ನಲ್ಲಿ ನಾರಾಯಣ ಮಂದಿರ ನೋಡಬಹುದು. ಜಗದಲ ಪುರದಿಂದ ಪಶ್ಚಿಮಕ್ಕೆ ಗಿದ್ ರಾಜ ಜಟಾಯುವಿನ ನೆನಪುತರುವ ಗೀದಂ ಊರು ತಲುಪಿ ಅಲ್ಲಿಂದ ಉತ್ತರಕ್ಕೆ ಇರುವ ಬಾಣಾಸುರನ ನೆನಪಿಗೆ ಇಟ್ಟಿರುವ ಬಾಣಾಸೂರ ಈಗ ಬದಲ್ಗೊಂಡು ಆಗಿರುವ ಬಾರಸೂರಿಗೆ ನಡೆದರೆ ಚಾಂದೇಲ ದೇವಾಲಯ ವಾಸ್ತುಶಿಲ್ಪಗಳನ್ನು ನೆನಪಿಸುವ ರಚನೆಗಳು, ಶಿಥಿಲಗೊಂಡಿವೆ, ಅವುಗಳನ್ನು ಸಂರಕ್ಷಿಸಲಾಗಿದೆ. ಮಾಮ ಭಾಂಜ ಮಂದಿರ, ಚಂದ್ರಾದಿತ್ಯ ಮಂದಿರಗಳು ಸುಂದರ ಭಿತ್ತಿಗಳಲ್ಲಿರುವ ನರಸಿಂಹನ ಶಿಲ್ಪ ಆಕರ್ಷಕ, ಸೂರಿಗೆ, ಒಳಗಿನ ಗೋಡೆಗಳಿಗೆ ಗಾರೆಯನ್ನು ಲೇಪಿಸಲಾಗಿದೆ ಹಿಂದೆ ಚಿತ್ರಗಳಿದ್ದಿರಬಹುದು. ಶಿವಮಂದಿರ ಶಿಥಿಲವಾಗಿದ್ದು ಬಯಲಲ್ಲೇ ಬೃಹದಾಕಾರದ ೨ ಗಣಪತಿಶಿಲ್ಪಗಳಿವೆ. ಶಿಥಿಲಗೊಂಡಿರುವ ಅಥವಾ ಮಧ್ಯಯುಗದಲ್ಲಿ ದಾಳಿಗೊಳಗಾದ ಈ ದೇವಾಲಯಗಳ ಹಲವು ಶಿಥಿಲ ಬಿಡಿ ಶಿಲ್ಪಗಳನ್ನು ಸಂಗ್ರಹಿಸಿಡಲಾಗಿದೆ.

ಓರ್ಛಾ..

ಟಿಕಾಮ್‌ಗರ್ ಜಿಲ್ಲೆಯಲ್ಲಿರುವ ಓರ್ಛಾ ಮಧ್ಯಕಾಲನಂತರದ ಕಲಾ ಪರಂಪರೆಯ ಆಸ್ತಿ.ಕ್ರಿ.ಶ.೧೬ ಮತ್ತು ೧೭ನೆಯ ಶತಮಾನದ ಅರಮನೆಗಳನ್ನು ದೇವಾಲಯಗಳನ್ನು ಇಂದಿಗೂ ಇಲ್ಲಿಕಾಣುತ್ತೇವೆ. ಅತ್ಯಂತ ಪುಟ್ಟ ಊರಾದ ಇಲ್ಲಿಗೆ ಬಸ್ಸುಗಳ ಸೌಕರ್ಯವಿಲ್ಲದಿರುವುದು ಅಚ್ಚರಿಯುಂಟುಮಾಡುತ್ತದೆ. ವಿದೇಶಿ ಪ್ರವಾಸಿಗರಿಗೆ ಅತ್ಯಂತ



ಓರ್ಛಾದ ಲಕ್ಷ್ಮೀನಾರಾಯಣ ದೇವಾಲಯ.


ಆಕರ್ಷಕತಾಣವಾದ ಓರ್ಛಾ ಬೆಟ್ವಾನದಿಯ ದಂಡೆಯಲ್ಲಿದೆ. ಕಲ್ಲು ಇಟ್ಟಿಗೆ, ಗಾರೆಗಳಿಂದ ಆಕಾಶವನ್ನು ಮುಟ್ಟುವ ಉದ್ದೇಶ ಹೊಂದಿರುವಂತೆ ಕಾಣುವ ಬೃಹತ್ ಚತುರ್‌ಬುಜ್ ದೇವಾಲಯ, ರಾಮರಾಜ್ಯದೇವಾಲಯ, ಲಕ್ಷ್ಮೀನಾರಾಯಣದೇವಾಲಯ, ಚತುರ್ ಬುಜ್ ದೇವಾಲಯದಲ್ಲಿ ಭಿತ್ತಿ ಚಿತ್ರಗಳಿದ್ದವಾದರೂ ಈಗ ಉಳಿದಿಲ್ಲ; ಒಂದೆರಡು ಕಡೆ ಅದರ ಚೂರುಪಾರು ಮಸಕಾಗಿ ಕಾಣುತ್ತದೆ. ಆದರೆ ಲಕ್ಷ್ಮೀನಾರಾಯಣ ದೇವಾಲಯದಲ್ಲಿ ಓರ್ಛಾ ಬುಂದೇಲ್ ಶೈಲಿಯ ಭಿತ್ತಿಚಿತ್ರಗಳು ಧಾರಾಳವಾಗಿ ಉಳಿದುಕೊಂಡಿವೆ. ಗೋಡೆಗಳಲ್ಲಿ ಮತ್ತು ಸೂರುಗಳಲ್ಲಿರುವ ಈ ಚಿತ್ರಗಳಲ್ಲಿ ರಾಮಾಯಣ ಹಾಗೂ ಅಂದಿನ ಸಮಕಾಲೀನ ಸಾಮಾಜಿಕ ವಸ್ತು ವಿಶೇಷಗಳಿವೆ. ಮೂಲ ಬಣ್ಣಗಳ ಉಜ್ವಲತೆಯನ್ನು ಉತ್ತಮವಾಗಿ ಸಂರಕ್ಷಿಸಲಾಗಿದೆ. ಕೆಲವೆಡೆ ಅತ್ಯಂತ ಕುಶಲತೆಯಿಂದ ಕೂಡಿದ್ದರೆ ಮತ್ತು ಕೆಲವೆಡೆ ಒರಟಾಗಿ ರೇಖಿಸಿ ಬಣ್ಣ ತುಂಬಲಾಗಿದೆ. ಮಧುಕರ್ ಷಾ ನಿಂದ ಕಟ್ಟಲ್ಪಟ್ಟ ರಾಜಮಹಲಿನಲ್ಲೂ ಭಿತ್ತಿ ಚಿತ್ರಗಳಿವೆ. ಓರ್ಛಾಗೆ ಆಗಮಿಸಿದ ಚಿತ್ರಕಲಾವಿದರು ಪ್ರಾರಂಭದಲ್ಲಿ ಚಿತ್ರಿಸಲು ಈ ಮಹಲಿನ ಭಿತ್ತಿ ಸೂರುಗಳನ್ನು ಬಳಸಿಕೊಂಡಿರಬಹುದು. ದಶಾವತಾರದ ಚಿತ್ರಗಳು ಆಕರ್ಷಕ. ಅರಸನು ಸಾರ್ವಜನಿಕರನ್ನು ಭೇಟಿಮಾಡುತ್ತಿದ್ದ ಕಟ್ಟಡದಲ್ಲೂ ಭಿತ್ತಿ ಚಿತ್ರಗಳಿವೆ. ಕೃಷ್ಣಲೀಲೆ ಪ್ರಾಣಿ, ಪಕ್ಷಿಗಳು ಇತ್ಯಾದಿಗಳು ತುಂಬಿವೆ, ಕವಿಯಿತ್ರಿ ಮತ್ತು ಗಾಯಕಿ ರಾಯ್ ಪರ್‌ವೀನ್‌ಳ ಮಹಲ್‌ನಲ್ಲೂ ಅವಳನ್ನು ಚಿತ್ರಿಸಿರುವ ಹಲವು ಭಿತ್ತಿ ಚಿತ್ರಗಳೀಗ ವಿಕೃತಗೊಂಡಿವೆ. ಕ್ರಿ.ಶ.೧೭ನೆಯ ಶತಮಾನದಲ್ಲಿ ಚಕ್ರವರ್ತಿ ಜಹಾಂಗೀರ್ ಓರ್ಛಾಗೆ ಭೇಟಿನೀಡಿದ ಸಂದರ್ಭದಲ್ಲಿ ರಾಜಾ ಬೀರ್‌ಸಿಂಗ್‌ಜು ದೇವೇ ನಿಂದ ಕಟ್ಟಲ್ಪಟ್ಟ ಜಹಾಂಗೀರ್ ಮಹಲ್ ಅಕರ್ಷಕ ವಾಸ್ತುಶಿಲ್ಪಗಳಲ್ಲೊಂದು. ಒಟ್ಟಾರೆ ಓರ್ಛಾದ ದೇವಾಲಯಗಳು ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಮೆರೆಯುತ್ತಿವೆ. ನದಿಯಂಚಿನ ಅರಸರ ಸ್ಮಾರಕ ಸಮಾಧಿಗಳು (Chhatries) ಸಹ ಸುಂದರವಾಗಿ ಕಟ್ಟಲ್ಪಟ್ಟಿವೆ. ಹೀಗೆ ಚಿತ್ರಶಿಲ್ಪ, ವಾಸ್ತುಶಿಲ್ಪ ಕಲೆಗಳಲ್ಲಿ ಕಾಲಕಾಲಕ್ಕೆ ವೈವಿಧ್ಯಮಯ ಕೊಡುಗೆಯನ್ನು ಭಾರತೀಯ ಕಲಾರಂಗಕ್ಕೆ ನೀಡಿರುವ ಈ ರಾಜ್ಯ ಸಮಕಾಲೀನ ಕಲೆಯಲ್ಲೂ ಹಲವು ಹತ್ತು ಸಾಧನೆಗಳನ್ನು ಸಾಧ್ಯತೆಗಳನ್ನು ಮಾಡಿ ತೋರಿಸಿದೆ.



ರಝಾರವರ ಒಂದು ಕಂಪ್ಯೂಟರ್ ವರ್ಣಚಿತ್ರ.

<u>ಬೇಂದ್ರೆ, ರಝಾ...</u>

೧೯೩೦ರ ಸುಮಾರಿನ ಸ್ವಾತಂತ್ರ್ಯ ಪೂರ್ವದಲ್ಲಿ ಇಂದೂರಿನ ರಾಜ್ಯ ಸರ್ಕಾರದ ಕಲಾಶಾಲೆಯಲ್ಲಿ B.D.ದೇವಿಲಾಲಿಕರ್‌ರವರ ಮಾರ್ಗದರ್ಶನದಲ್ಲಿ ಹಲವರು ಕಲಿತು ಕಲಾವಿದರಾದರು. ಪ್ರತಿಭಾವಂತರೂ ಇದ್ದರು. ಅವರಲ್ಲಿ ನಾರಾಯಣ ಶ್ರೀಧರ್ ಬೇಂದ್ರೆ ಒಬ್ಬರು. ಯೂರೋಪಿಯನ್ ಕಲೆ. ಅದರಲ್ಲೂ ರಾಯಲ್ ಅಕಾಡೆಮಿ ಮಾದರಿಯ ನೈಜ ಶೈಲಿಯನ್ನು ಅರಗಿಸಿಕೊಂಡವರು. ೧೯೪೫ರಲ್ಲಿ ಶಾಂತಿನಿಕೇತನದಲ್ಲಿ Artist-in-residence ಆಹ್ವಾನಕ್ಕೆ ಪಾತ್ರರಾಗಿ ನಂದಲಾಲ್ ಬೋಸ್ ಮತ್ತು ರಾಮ್‌ಕಿಂಕರ್ ಬೈಜ್ ವಿನೋದ್ ವಿಹಾರಿ ಮುಖರ್ಜಿಯವರೊಂದಿಗೆ ಬೆರತುಸೃಷ್ಟಿಸಿದರು. ನಂತರ ಹಲವು ಎತ್ತರಗಳನ್ನು ಏರಿದರು; ರಾಷ್ಟ್ರಪತಿಗಳ ಪದ್ಮಶ್ರೀಯನ್ನು ೧೯೬೯ರಲ್ಲಿ ಪಡೆದರು. ಈ ರಾಜ್ಯದ ಮತ್ತೊಬ್ಬ ಹಿರಿಯ ಕಲಾವಿದರಲ್ಲೊಬ್ಬರಾದ ಎಸ್.ಹೆಚ್.ರಝಾ ಬಾವರಿಯಲ್ಲಿ೧೯೨೨ರಲ್ಲಿ ಜನಿಸಿದವರು. ಶಾಲೆಯಲ್ಲಿ ಅವರ ಶಿಕ್ಷಕರು ಬಿಂದುವನ್ನು



ಅನ್ವರ್



ಅನಿಲ್ ಕುಮಾರ್

ಗುರ್ತಿಸಿ ಅದರತ್ತ ತದೇಕ ಚಿತ್ತದಿಂದ ನೋಡುವಂತೆ ಮಾಡಿದ ಫಲ ನಂತರ ಬೆಳೆದ ಅನುಭವ, ಕಲಾಸೃಷ್ಟಿಯ ಅದಮ್ಯ ಚೇತನವಾಗಿ ರಝಾಮೂಡಿಬಂದರು. ಅವರೀಗ, ಪ್ಯಾರೀಸಿನಲ್ಲಿದ್ದರೆ ದಿ|| ಡಿ.ಜೆ. ಶ್ರಣೆತ್ ಜೈನ್, ಚಂಡೇಶ ಸೆಕ್ಸೇನಾ, ಮಂಜೂಷಾ ನಿಲೇಕರ್, ಶಿರೋಮಣಿದೇವಿ. ಸಚಿದಾನಾಗ್ ದೇವ್, ಅನಿಲ್ ಕುಮಾರ್ (ಶಿಲ್ಪಿ) ವಿಜಯಸಿಂಧೆ, ಅನ್ವರ್, ರಾಜಿನ್ ಡೇವಿಡ್ ತುಷಾರ್ ಡೀಗೆ, ಶ್ರೀಧರ್ ಅಯ್ಯರ್, ಅಖಿಲೇಶ್, ಹರ್‌ಚಂದ್ ಸಿಂಹ ಭಟ್ಟಿ, ದೇವಿಲಾಲ್ ಪಾಟೀಲ್‌ದಾರ್ (ಶಿಲ್ಪಿ) ರುಬಿನಾ ಅಲಿ, (ರೇವಾ ಅರಮನೆಯ ಆಸ್ಥಾನ ಶಿಲ್ಪಿಯೊಬ್ಬರ ಪುತ್ರರಾದ ಜಾವ್ವನಿ ಶಾಂತಿನಿಕೇತನದಲ್ಲಿ ಶಿಲ್ಪಕಲೆಯನ್ನು ಕಲಿತು ಪ್ರಸ್ತುತ ಕರ್ನಾಟಕದಲ್ಲಿ ನೆಲೆಸಿದ್ದಾರೆ) ಪ್ರಮೋದ್ ಕುಮಾರ್ ಶರ್ಮಾ ಯೂಸಫ್ ಮೊದಲಾದವರು ರಾಜ್ಯದ ಕಲಾಭೂಪಟದಲ್ಲಿ ಗಮನಾರ್ಹ ಕೊಡುಗೆ ನೀಡಿ ದಾಖಲಾಗಿದ್ದಾರೆ.

<u>ಭಾರತ ಭವನ</u>

ಭೂಪಾಲದ ಭಾರತ ಭವನದ ಕೊಡುಗೆ ಅಲ್ಲಿನ ಕಲಾವಿದರ ಉತ್ಸಾಹಕ್ಕೆ ಅದ್ಭುತವೆನ್ನುವಷ್ಟು ಸ್ಫೂರ್ತಿನೀಡಿದೆ. ೧೯೮೨ರಲ್ಲಿ ದಿ||ಇಂದಿರಾಗಾಂಧಿಯವರಿಂದ ಉದ್ಘಾಟನೆಗೊಂಡು ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದ ಕಲಾಪ್ರದರ್ಶನಗಳನ್ನು ವ್ಯವಸ್ಥೆಮಾಡುವ ಭಾರತ್ ಭವನ ರಾಷ್ಟ್ರೀಯ ಕಲಾಕೇಂದ್ರವಾಗಿ ಬೆಳೆದುನಿಂತಿದೆ. ಸಾಹಿತ್ಯಕ, ಪ್ರದರ್ಶಕ ಮತ್ತು ದೃಶ್ಯಕಲೆಗಳ ಈ ಕೇಂದ್ರವನ್ನು ಸಮಕಾಲೀನ ವಾಸ್ತುಶಿಲ್ಪಿ ಚಾರ್ಲ್ಸ್ ಕೊರಿಯ ವಿನ್ಯಾಸಗೊಳಿಸಿದ್ದಾರೆ. ನಿರ್ವಾಹಕರ ಮಾತುಗಳಲ್ಲಿ ಹೇಳಬಹುದಾದರೆ "Bharath Bhavan is a centre for innovative creativity pursuit of classics and tradition and wide participation in a new cultural up surge" ಚಿತ್ರ ಶಿಲ್ಪ ಗ್ರಾಫಿಕ್‌ಗಳಿಗಾಗಿ ರೂಪಾಂಕರ್, ರಂಗಭೂಮಿಗಾಗಿ



ಭಾರತ ಭವನ್

ರಂಗ ಮಂಡಲ್, ಭಾರತೀಯ ಕಾವ್ಯಕ್ಕಾಗಿ ವಾಗಾರ್ಥ ಶಾಸ್ತ್ರೀಯ ಮತ್ತು ಜಾನಪದ ಸಂಗೀತದ ಭಂಡಾರ ಅನ್ಹದ್ ಇತ್ಯಾದಿಗಳು ಅಲ್ಲಿವೆ. ರೂಪಾಂಕರ್‌ನಲ್ಲಿ ಸಮಕಾಲೀನ ಮತ್ತು ಆದಿವಾಸಿ, ಜಾನಪದ ಕಲೆಗಳನ್ನು ಪ್ರದರ್ಶಿಸಲಾಗಿದೆ ರೂಪಾಂಕರ್ ಜೆ. ಸ್ವಾಮಿನಾಥನ್‌ರ ಮಾರ್ಗದರ್ಶನದಲ್ಲಿ ಅತ್ಯುತ್ತಮ ಆರಂಭಕಂಡಿತು. ಮಧ್ಯಪ್ರದೇಶದ ಆದಿವಾಸಿ ಜನರ ಕಲೆಯ ಕುರಿತು ಸ್ವಾಮಿನಾಥನ್ ರವರ "The perceiving fingers" ಆ ಕಲೆಗಳನ್ನು ಅತ್ಯುತ್ತಮವಾಗಿ ದಾಖಲಿಸಲಾಗಿರುವ ವರ್ಣಮಯ ಕ್ಯಾಟಲಾಗು. ಅಲ್ಲಿನ ಮಹತ್ವದ ಪ್ರಕಟಣೆ, ಸ್ವಲ್ಪದೂರದಲ್ಲಿರುವ ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯವು ನಮ್ಮ ದೇಶದ ಆದಿವಾಸಿ ಜನರ ಜೀವನ ಕಲೆಗಳಿಗೆ ಸಂಬಂಧಿಸಿದ ಶಾಶ್ವತ ಪ್ರದರ್ಶನವನ್ನು ವ್ಯವಸ್ಥೆಮಾಡಿದೆ. ಅಪರೂಪದ ವಸ್ತುಗಳನ್ನು ಸಂಗ್ರಹಿಸಿದೆ. ಅವುಗಳಲ್ಲಿ ಮುಕವಾಡಗಳು, ಬಸ್ತಾರಿನ ಮಾವೋಲಿ ಮಾತಾ ದೇವಾಲಯದ ಮರಗೆತ್ತನೆಗಳು, ಬಸ್ತಾರಿನ ದಸರಾ ರಥ ಮುಖ್ಯವಾದುವು. ಹೀಗೆ ಮಧ್ಯ ಪ್ರದೇಶವನ್ನು ಒಳಹೊಕ್ಕರೆ ಹೊರಬಾರಲಾಗದಷ್ಟು ಆಳದ ಕಲಾಸಂಪದ, ಇತಿಹಾಸ ಪೂರ್ವ ಕಾಲವನ್ನೇ ಅಲ್ಲದೆ ಸಮಕಾಲೀನ ಕಾಲದ ಅಭಿವ್ಯಕ್ತಿಗಳನ್ನು ಸಮರ್ಥವಾಗಿ ಅರಗಿಸಿಕೊಂಡಿರುವ ಈ ರಾಜ್ಯ ನಮ್ಮ ರಾಷ್ಟ್ರದ ಒಂದು ಅಪರೂಪದ ಕಲಾನಿಧಿ.